# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ/ಆ-1/123/ಕರಾಆ/2021(ಭಾಗ-1)

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ,
ಬೆಂಗಳೂರು-560 001. **ದಿನಾಂಕ:17.10.2023**

## ಸುತ್ತೋಲೆ

ವಿಷಯ: ಕನ್ನಡ ರಾಜ್ಯೋತ್ಸವವನ್ನು ಆಚರಿಸುವ ಕುರಿತು.

***

ಕರ್ನಾಟಕ ವಿಧಾನ ಮಂಡಲದ ವತಿಯಿಂದ ದಿನಾಂಕ:**01.11.2023ರ** ಬುಧವಾರದಂದು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರರುಗಳು ಹಾಗೂ ಅವರ ಕುಟುಂಬ ವರ್ಗದವರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಆದುದರಿಂದ, ಆಸಕ್ತಿಯುಳ್ಳ ಈ ಸಚಿವಾಲಯದ ಅಧಿಕಾರಿ/ನೌಕರರುಗಳು ಹಾಗೂ ಕುಟುಂಬ ವರ್ಗದವರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ತಮ್ಮ ಹೆಸರುಗಳನ್ನು ದಿನಾಂಕ:18.10.2023ರ ಸಂಜೆ:05.00ಗಂಟೆಯೊಳಗಾಗಿ ಉಪ ಕಾರ್ಯದರ್ಶಿ, ಆಡಳಿತ ಶಾಖೆ, ಕರ್ನಾಟಕ ವಿಧಾನ ಪರಿಷತ್ತು, ಇವರ ಬಳಿ ನೋಂದಾಯಿಸಿಕೊಳ್ಳಬೇಕೆಂದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿರುವ ಅಧಿಕಾರಿ/ನೌಕರರುಗಳಿಗೆ ದಿನಾಂಕ:25.10.2023 ರಿಂದ 31.10.2023ರವರೆಗೆ ಮಧ್ಯಾಹ್ನ:01.00 ಗಂಟೆಯಿಂದ 03.00ಗಂಟೆಯವರೆಗೆ ಅಭ್ಯಸಿಸಲು (ಕಚೇರಿಯ ಕೆಲಸಗಳಿಗೆ ಅಡಚಣೆಯಾಗದಂತೆ) ಅನುಮತಿಯನ್ನು ನೀಡಲಾಗಿದೆ.

Anasuya
(ಅನಸೂಯಮ್ಮ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಗೆ:

ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ(ಶಾಸಕರ ಭವನವು ಸೇರಿದಂತೆ)

ಪ್ರತಿಗಳು:

1. ಮಾನ್ಯ ಸಭಾಪತಿಯವರ ಕಾರ್ಯದರ್ಶಿಯವರಿಗೆ, ಕವಿಪ.
2. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
3. ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರುಗಳಿಗೆ, ಕವಿಪ.
4. ಸಂಬಂಧಪಟ್ಟ ಕಡತಕ್ಕೆ.